<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 08.02.2024
ಪಾಟಿ ಸವಾಲು : ವಾದಿ ಪರ ಶ್ರೀ ಎಸ್.ಪಿ.ಪಿ ವಕೀಲರಿಂದ

ನನ್ನ ತಂದೆ ಕೆಂಪೇಗೌಡರ ಒಡಹುಟ್ಟಿದವರ ಹೆಸರು ಮರಿಗೌಡ. ನನ್ನ ತಂದೆ ಕೆಂಪೇಗೌಡರಿಗೆ ಇಬ್ಬರು ಗಂಡು ಮಕ್ಕಳು ಅವರೆಂದರೆ ನಾನು ಮತ್ತು ಮಲ್ಲೇಗೌಡ. ನನ್ನ ಅಣ್ಣ ಮಲ್ಲೇಗೌಡ ಈಗ ಮೃತರಾಗಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಅವರೆಂದರೆ ಮಹೇಶ್, ಪ್ರಕಾಶ, ಗಿರಿಜಾ ಹಾಗೂ ರೇಣುಕ.

ನನ್ನತಂದೆ ಕೆಂಪೇಗೌಡರಿಗೆ ದೇವಮ್ಮ, ಹೊನ್ನಾಜಮ್ಮ ಹಾಗೂ ಜಯಲಕ್ಷ್ಮೀ ಎನ್ನುವ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ದೇವಮ್ಮ, ಹೊನ್ನಾಜಮ್ಮ ಹಾಗೂ ಜಯಲಕ್ಷ್ಮೀ ಮತ್ತು ಮಲ್ಲೇಗೌಡ ಹಾಗೂ ನನ್ನನ್ನು ಹೊರತುಪಡಿಸಿ ಕೆಂಪೇಗೌಡರ ಕುಟುಂಬದಲ್ಲಿ ಇನ್ಯಾರು ಇರುವುದಿಲ್ಲ ಎಂದರೆ ಸರಿ.

ರಾಘವ ಬಿನ್ ಮಲ್ಲೇಗೌಡ ಎನ್ನುವವರು ನಮ್ಮ ಕುಟುಂಬ ಸದಸ್ಯರಲ್ಲ. ಮಹಲಿಂಗಚಾರಿ ಬಿನ ಏತ್ತಾಚಾರಿ ಎನ್ನುವವರು ನಮ್ಮ ಕುಟುಂಬದ ಸದಸ್ಯರಲ್ಲ. ಸ.ನಂ.187/1 ರ ಸ್ವತ್ತು ಮಹಲಿಂಗಚಾರಿ ರವರ ಹೆಸರಿನಲ್ಲಿರುತ್ತದೆ. ಸ.ನಂ.187/1 ನನ್ನ ತಂದೆ ಕೆಂಪೇಗೌಡರ ವಂಶಸ್ಥರಿಗೆ ಸೇರಿದ ಸ್ವತ್ತಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಗಳು ಏನೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ದಾವಾ ಐಟಂ.2 ಈ ಮೊದಲು ನನ್ನ ತಂದೆ ಕೆಂಪೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತಾಗಿದ್ದು ಅದನ್ನು ಲಪಟಾಯಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಕುಳ್ಳೇಗೌಡ ಎನ್ನುವವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ದಾವಾ ಐಟಂ.2 ರ ಸ್ವತ್ತು ಕುಳ್ಳೇಗೌಡ ಬಿನ್ ಚಿಕ್ಕಹೈದೇಗೌಡ ಎನ್ನುವವರಿಗೆ ಸೇರಿತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ.

(ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.